ಅಧ್ಯಕ್ಷರು: ಈ ಸದನ ಮುಗಿಯುವುದರೊಳಗಡೆ ಆನ್ಸರ್ ಕೊಡಿಸುತ್ತೇನೆ.

ಶ್ರೀ ಹೆಚ್.ಎಸ್ ಶಂಕರಲಿಂಗೇಗೌಡ: ಅಲ್ಲಾ ಸರ್, ಇದು ಬಹು ಮುಖ್ಯವಾದ ಕೆಲಸ ಹಾಸ್ಟೆಲ್‌ನಲ್ಲಿರತಕ್ಕಂಥವರು ಬಡ ಜನರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರ ವಿದ್ಯಾರ್ಥಿಗಳು, ಅವರಿಗೆ ಊಟ ಕೊಡುವುದರ ಬದಲಿ ಲದ್ದಿಯನ್ನು ಕೊಡುತ್ತಿದ್ದಾರಲ್ಲಾ ಅದರ ಬಗ್ಗೆ ಬರೆದಿದ್ದಾರೆ.

ಅಧ್ಯಕ್ಷರು: ಆಯಿತು.

ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರವನ್ನು ಸ್ಥಾಪಿಸುವುದು

41 (194) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಕಾರ್ಮಿಕ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಪ್ರಸಕ್ತ ಸಾಲಿನಲ್ಲಿ ರಾಜ್ಯದ ಯಾವ ಯಾವ ಪ್ರದೇಶದಲ್ಲಿ ಹೊಸದಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಒಪ್ಪಿಗೆ ನೀಡಲಾಗಿದೆ;

ಆ) ಬೀದರ್ ಜಿಲ್ಲೆಯ ಔರಾದ್‌ನಲ್ಲಿ ಐಟಿಐಯನ್ನು ಪ್ರಾರಂಭಿಸುವ ಬಗ್ಗೆ ಇದುವರೆವಿಗೆ ನಡೆದಿರುವ ಪತ್ರ ವ್ಯವಹಾರಗಳ ಮತ್ತು ಸರ್ಕಾರದ ಪ್ರಸ್ತಾವನೆಗಳ ವಿವರಗಳೇನು ;

ಇ) ಔರಾದ್‌ನಲ್ಲಿ ಐಟಿಐಯನ್ನು ಪ್ರಾರಂಭಿಸಲು ಪ್ರಕ್ರಿಯೆಗಳು ಮುಗಿದಿದ್ದರೂ ಕೂಡ ಔರಾದ್ ಅನ್ನು ಕಡೆಗಣಿಸಿ ಬೇರೆ ಪ್ರದೇಶಗಳೀಗೆ ಐಟಿಐ ಸ್ಥಾಪನೆಗೆ ಅನುಮತಿ ನೀಡಲು ಕಾರಣಗಳೇನು ;

ಈ) ಹಾಗಿದ್ದಲ್ಲಿ, ಔರಾದ್‌ನಲ್ಲಿ ಐಟಿಐ ಅನ್ನು ಪ್ರಾರಂಭಿಸಲು ಸರ್ಕಾರ ಕೂಡಲೇ ಆದೇಶವನ್ನು ಹೊರಡಿಸಲು ಕ್ರಮ ಕೈಗೊಳ್ಳುವುದೇ ;

ಉ) ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು)

ಅ) 1. ಆಲೂರು ಸಿದ್ದಾಪುರ, ಕೊಡಗು ಜಿಲ್ಲೆ
2. ಕೆ.ಆರ್. ಪೇಟೆ, ಮಂಡ್ಯ ಜಿಲ್ಲೆ
3. ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆ
4. ಪಡವಲಹಿಪ್ಪೆ, ಹೊಳೆನರಸೀಪುರ, ಹಾಸನ ಜಿಲ್ಲೆ

5. ಮುಂಡಗೋಡು, ಕಾರವಾರ ಜಿಲ್ಲೆ
6. ಗಂಗಾವತಿ, ಕೊಪ್ಪಳ ಜಿಲ್ಲೆ
7. ಶಿಕಾರಿಪುರ, ಶಿವಮೊಗ್ಗ ಜಿಲ್ಲೆ

ಆ) ಬೀದರ್ ಜಿಲ್ಲೆಯ ಔರಾದ್‌ನಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆ ತೆರೆಯುವ ಬಗ್ಗೆ ಮತ್ತು ಇತರ ಸ್ಥಳಗಳಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆ ತೆರೆಯುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುತ್ತದೆ.

ಇ) ಆಯವ್ಯಯ ಕೊರತೆಯಿಂದ ಪ್ರಸ್ತಾಪಿಸಲಾಗಿರುವ ಎಲ್ಲಾ ಪ್ರದೇಶಗಳಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಪರಿಗಣಿಸಲಾಗಿರುವುದಿಲ್ಲ.

ಈ) ಆಯವ್ಯಯ ಕೊರತೆಯಿಂದ ಪ್ರಸ್ತಾಪಿಸಲಾಗಿರುವ ಎಲ್ಲಾ ಪ್ರದೇಶಗಳಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಪರಿಗಣಿಸಲಾಗಿರುವುದಿಲ್ಲ.

ಉ) ಆಯವ್ಯಯ ಕೊರತೆಯಿಂದ ಪ್ರಸ್ತಾಪಿಸಲಾಗಿರುವ ಎಲ್ಲಾ ಪ್ರದೇಶಗಳನ್ನು ಸ್ಥಾಪಿಸಲು ಪರಿಗಣಿಸಲಾಗಿರುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದೀರಿ, ದಿ:25.5.2006 ರೊಳಗೆ ಒಂದು ಪ್ರಪೋಸಲ್ ತಮ್ಮ ಹತ್ತಿರ ಬಂದಿತ್ತು. ಆಗ ಔರಾದ್ ಎಲ್ಲದರಲ್ಲಿಯೂ ಹಿಂದುಳಿದಿದ್ದು ಎಂದು ಅದನ್ನು ಮೊದಲನೇ ನಂಬರ್‌ದಲ್ಲಿ ಹಾಕಿದ್ದರು. ಜಾಯಿಂಟ್ ಡೈರೆಕ್ಟರ್‌ವರು ಪ್ರಪೋಸಲ್‌ನ್ನು ಕೂಡ ಕಳುಹಿಸಿದ್ದರು. ಆಮೇಲೆ ಹೋರಾಟ ಸಮಿತಿಯವರು ಬಂದಾಗಲು ಕೂಡ ತಾವು ಬರೆದಿದ್ದೀರಿ. ಅದಕ್ಕೆ ಮಾನ್ಯ ಬಂಡೆಪ್ಪನವರು ಒಂದು ಅರ್ಜಿಯನ್ನು ಕೊಟ್ಟಿದ್ದರು ಅದಕ್ಕು ತಾವು ಬರೆದಿದ್ದೀರಿ. ಅವರು ವಿಧಾನ ಪರಿಷತ್ತಿನಲ್ಲಿ ಪ್ರಶ್ನೆಯನ್ನು ಕೇಳಿದ್ದರು ಆ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೀರಿ, ಪ್ರಪೋಸಲ್ ಇದೆ ನಾವು ಮಾಡುತ್ತೇವೆಂದು ಹೇಳಿ, ಇದ್ದಕ್ಕಿದ್ದ ಹಾಗೆ ಅದನ್ನು ತೆಗೆದು ಬೇರೆ ಊರನ್ನು ಹಾಕಿದ್ದೀರಿ. ಬಾಕಿ ಎಲ್ಲಾ ಪ್ರಪೋಸಲ್ ಬಂದಿದೆ, ಔರಾದ್ ಮಾತ್ರ ತೆಗೆದಿದ್ದೀರಿ ಏಕೆ? ಅದು ಅತೀ ಹಿಂದುಳಿದಿದ್ದು ನಾನು ಕಾಂಗ್ರೆಸ್‌ನವನಾಗಿದ್ದಕ್ಕೆ ಅದನ್ನು ತೆಗೆದಿರಬಹುದೆಂದು ನನಗನಿಸಿರುತ್ತದೆ. ಬೀದರ್ ಜಿಲ್ಲೆಯಲ್ಲಿ ನಾನೊಬ್ಬನೇ ಕಾಂಗ್ರೆಸ್ ಶಾಸಕನಾಗಿರುವುದು, ಬಾಕಿ ಎಲ್ಲಾ ಬಂದಿದೆ ನನ್ನದೊಂದು ಮಾತ್ರ ಬಂದಿಲ್ಲ. ಇದನ್ನು ಉದ್ದೇಶಪೂರ್ವಕವಾಗಿ ಮಾಡಿದ್ದೀರಿ. ಅದನ್ನು ಏತಕ್ಕಾಗಿ ಮಾಡಿದ್ದೀರಿ. ಡಾ: ನಂಜುಂಡಪ್ಪ ವರದಿಯ

ಪ್ರಕಾರ ಅತೀ ಹಿಂದುಳಿದ ತಾಲ್ಲೂಕು ಎಂದು ಹೇಳಿದ್ದರೂ ಕೂಡ, ಅದನ್ನು ಪರಿಗಣಿಸದೆ ಈಗ ಸಾಧ್ಯವೇ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದೀರಿ. ಮುಂದೆ ಮಾಡುವುದಕ್ಕೆ ಆಗುತ್ತದೆಯೇ ಎಂದು ಕೇಳಿದರೆ ಮಾಡುವುದಕ್ಕಾಗು–ವುದಿಲ್ಲವೆಂದು ಉತ್ತರ ಬಂದಿದೆ. ಈ ಉತ್ತರದಿಂದ ಅರ್ಥ ಏನಾಗುತ್ತದೆ. ತಮ್ಮ ಉದ್ದೇಶ ಮಾಡುವುದಿಲ್ಲವೆಂದು ಆಗಿದೆ. ಉದ್ದೇಶಪೂರ್ವಕವಾಗಿ ಕಾಂಗ್ರೆಸ್‌ನವರಿಗೆ ಸತಾಯಿಸಬೇಕೆಂದು ಇದೆಯಾ? ಸರ್ಕಾರದ ಉದ್ದೇಶ ಏನು ಇದೆ? ಎಲ್ಲಾ ಆರ್ಡರ್‌ಗಳು ಇಲ್ಲಿವೆ. ಮತ್ತೆ ಮುಖ್ಯಮಂತ್ರಿಗಳು ಬರೆದಿದ್ದಾರೆ. ನಮ್ಮ ಮಾನ್ಯ ವರ್ಮಾರವರು ಇದ್ದಾರೆ ಅವರು ಒಂದು ಲೆಟರ್ ಕೊಟ್ಟಿದ್ದರು. ಅವರ ಲೆಟರ್ ಮೇಲೆ ಬರೆದಿದ್ದಾರೆ ITI ಕಾಲೇಜು ಮಾಡಬೇಕೆಂದು. ಇಷ್ಟೆಲ್ಲಾ ಇದ್ದರೂ ಕೂಡ ಉದ್ದೇಶಪೂರ್ವಕವಾಗಿ ಏತಕ್ಕಾಗಿ ತೆಗೆದಿದ್ದೀರಿ. ಪ್ರಪೋಸಲ್ ಇತ್ತು ಎಲ್ಲಾ ಇತ್ತು ಇಷ್ಟೆಲ್ಲಾ ಇದ್ದರೂ ಕೂಡ ಅದೊಂದನ್ನು ತೆಗೆದು ಬೇರೆ ಕಡೆ ಕಾಲೇಜುಗಳನ್ನು ಕೊಟ್ಟಿದ್ದಾರೆ. ಅದಕ್ಕೆ ಕಾರಣವೇನು? ಇದು ಏತರ ಸಲುವಾಗಿ?

ಶ್ರೀ ಇಕ್ಬಾಲ್ ಅನ್ಸಾರಿ: ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಹಿರಿಯ ಸದಸ್ಯರು ಅವರೇನು ಹೇಳಿದರು, ಔರಾದ್ ತಾಲ್ಲೂಕು ಕಾಂಗ್ರೆಸ್‌ದ್ದು ಅದಕ್ಕಾಗಿ ಅದನ್ನೊಂದೆ ತೆಗೆದಿದ್ದಾರೆಂದು ಹೇಳಿದರು. ಅದು ಸುಳ್ಳು ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಕೈಗಾರಿಕಾ ತರಬೇತಿಗೋಸ್ಕರ ರಾಜ್ಯದಲ್ಲಿ ಈ ವರ್ಷದ ಆಯವ್ಯಯದಲ್ಲಿ 5 ಹೊಸ ಕೇಂದ್ರಗಳನ್ನು ತೆಗೆಯಬೇಕೆಂದು ಬಜೆಟ್‌ನಲ್ಲಿತ್ತು. ಆ ಒಂದು ದಿಸೆಯಿಂದ ಔರಾದ್ ತಾಲ್ಲೂಕಿನ ಪ್ರಪೋಸಲ್ ನಮ್ಮ ಮುಂದಿದೆ, ಅದೇ ರೀತಿಯಾಗಿ ಬೇರೆ ಬೇರೆ ತಾಲ್ಲೂಕಿನ ಒಂದು ಪ್ರಸ್ತಾವನೆಯೂ ಸಹಿತ ಸರ್ಕಾರದ ಮುಂದಿದೆ. ಆದರೆ ಬಜೆಟ್‌ನಲ್ಲಿ ಹೆಚ್ಚಿನ ಹಣ ಈ ವರ್ಷ ಅಂದರೆ 2006–07 ರಲ್ಲಿ ಲಭ್ಯವಾಗಲಿಲ್ಲ ಎನ್ನುವ ಕಾರಣಕ್ಕೋಸ್ಕರ ಅದು ಮುಂದಿನ ವರ್ಷದ ಬಜೆಟ್‌ಗೆ ಹಾಕಿಕೊಳ್ಳಬೇಕೆಂದು ನಾವು ನಿರ್ಧರಿಸಿಕೊಂಡಿದ್ದೇವೆ. ಇನ್ನು ಎರಡನೆಯದಾಗಿ, ಈ ಸಧ್ಯದ ಪರಿಸ್ಥಿತಿಯಲ್ಲಿ ಔರಾದ್ ತಾಲ್ಲೂಕಿನಲ್ಲಿ ಸರ್ಕಾರದ ಅನುದಾನಿತ ಕೈಗಾರಿಕಾ ಸಂಸ್ಥೆ ಒಂದಿದೆ. ಅದು ಅಲ್ಲದೆ 5 ಖಾಸಗಿ ಸಂಸ್ಥೆಗಳು ಸಹಿತ ನಡೆಯುತ್ತಿದೆ. ಆಕಸ್ಮಾತ್ ಅಲ್ಲಿ ಈ ಕೈಗಾರಿಕಾ ತರಬೇತಿ ಕೇಂದ್ರಗಳು ಇಲ್ಲವೆ ಇಲ್ಲ ಎನ್ನುವ ಸಂದರ್ಭದಲ್ಲಿ ನಾವು ತೀವ್ರಗತಿಯಲ್ಲಿ ಅದನ್ನು ಪರಿಗಣಿಸುವುದಕ್ಕೆ ಸಾಧ್ಯವಾಗುತ್ತದೆ. ಈಗಾಗಲೇ ಅಲ್ಲಿ 6 ಕೇಂದ್ರಗಳು ಕೆಲಸವನ್ನು ನಿರ್ವಹಿಸುತ್ತಿವೆ.

ಈಗ ಸರ್ಕಾರದ್ದು ಇನ್ನು ಒಂದು ಬೇಕು ಎಂದಾಗ ಅದನ್ನು ಮುಂದಿನ ವರ್ಷದ ಬಜೆಟ್‌ನಲ್ಲಿ ಅಂದರೆ 2007–08 ರಲ್ಲಿ ನಾವು ಆಯವ್ಯಯದಲ್ಲಿ ಹೆಚ್ಚಿನ ಬಜೆಟ್‌ನ್ನು ಕೇಳಿಕೊಂಡು ಅದನ್ನು ಒದಗಿಸಲಿಕ್ಕೆ ನಾನು ಪ್ರಯತ್ನವನ್ನು ಮಾಡಿಕೊಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೆ, ಏಕೆಂದರೆ ಈ ಮೊದಲು ಮಾಡುತ್ತೇವೆಂದು ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ಈಗ 6 ಕಾಲೇಜುಗಳು ನಡೆಯುತ್ತವೆಂದು ಹೇಳುತ್ತಿದ್ದಾರೆ. ಆದರೆ ಯಾವುದು ಇದೆ, ಯಾರು ಖಾಸಗಿಯವರು ಮಾಡಿದ್ದಾರೆ. ಅದು ಯಾವುದು ಉಪಯೋಗವಾಗುವುದಿಲ್ಲ. ಅವು ನಡೆಯುತ್ತಿವೆ, ಹಿಂದುಳಿದ ತಾಲ್ಲೂಕಿನ ಜನರು ದಿನ ಬೆಳಿಗ್ಗೆ ಎದ್ದರೆ ಹೋರಾಟ ಮಾಡುತ್ತಿದ್ದಾರೆ. ಆ ಹೋರಾಟ ಅವರಿಗೆ ಗೊತ್ತಿದೆ. ಅಲ್ಲಿಂದ ಅರ್ಜಿ ಕೂಡ ಬಂದಿದೆ ಆದರೂ ಕೂಡ ಪರಿಗಣಿಸುತ್ತಿಲ್ಲವೆಂದರೆ ಇದಕ್ಕೆ ಏನು ಕಾರಣ? ಡಾ: ನಂಜುಂಡಪ್ಪನವರ ವರದಿಯಲ್ಲಿ ಬಂದಾಗಲು ಕೂಡ ತಾವು ಇದನ್ನು ಮಾಡುತ್ತಿಲ್ಲ. ಖಾಸಗಿಯವರು donation ಹಣ ತೆಗೆದುಕೊಳ್ಳುತ್ತಾರೆ ಅವರು ಪುಗಸೆಟ್ಟೆ ಮಾಡುವುದಿಲ್ಲ. ಅದಕ್ಕಾಗಿ ಸರ್ಕಾರದಿಂದ ತಾವು ಮಾಡಬೇಕು, ಜನ ಉದ್ಯೋಗವಿಲ್ಲದೆ ಸಾಯುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ತಾವು ಮಾಡುವುದಕ್ಕೆ ಹಿಂದು ಮುಂದು ನೋಡಿದರೆ ಹೇಗೆ? ಬಜೆಟ್ ಶಿಕಾರಿಪುರಕ್ಕೆ ಇದೆ. ಬಾಕಿದ್ದಕ್ಕೆ ಬಜೆಟ್ ಇಲ್ಲವೆಂದು ತಾವು ಒಂದು ಆರ್ಡರ್ ಹೊರಡಿಸಿದ್ದೀರಿ. ಆ ಆರ್ಡರದಲ್ಲಿ ಏನಿದೆ ಎಂದರೆ ಎಲ್ಲದಕ್ಕು ಬಜೆಟ್ ಇದೆ. ಔರಾದ್ ಒಂದಕ್ಕೆ ಬಜೆಟ್ ಇಲ್ಲವೆಂದರೆ, ಇದು ಉದ್ದೇಶಪೂರ್ವವಾಗಿ ಆಗಿದ್ದು ಎಂದು ಅರ್ಥವಾಗುವುದಿಲ್ಲವಾ? ಮುಂಡಗೋಡಕ್ಕೆ ಬಜೆಟ್ ಇದೆ, ಶಿಕಾರಿಪುರಕ್ಕೆ ಬಜೆಟ್ ಇದೆ. ಗಂಗಾವತಿಗೆ ಬಜೆಟ್ ಇದೆ. ಆದರೆ ಔರಾದ್‌ಗೆ ಇಲ್ಲ. ಇದರ ಉದ್ದೇಶ ಏನು? ಇದರ ಅರ್ಥವೇನು? ನೀವು ಮಾಡಿಕೊಳ್ಳುತ್ತೀರಿ, ನಮಗೂ ಒಂದು ಮಾಡಿ ಕೊಡಿ, ನೀವು ಏಕೆ ಮಾಡಿಕೊಂಡಿದ್ದೀರೆಂದು ನಾನು ಕೇಳುತ್ತಿಲ್ಲ. ನೀವು ಮಂತ್ರಿಗಳು ಇರುವುದರಿಂದ ಸಂತೋಷವಾಗಿ ಎಲ್ಲಿಯಾದರೂ ಮಾಡಿಕೊಳ್ಳಿ. ನಮಗೆ ಏಕೆ ಕೊಡಬಾರದು, ಎಲ್ಲದಕ್ಕು ಹಿಂದುಳಿದ ತಾಲ್ಲೂಕು ಅಲ್ಲಿಗೆ ಕೊಡುವುದಿಲ್ಲವೆಂದರೆ ಏನರ್ಥ? ಉದ್ದೇಶಪೂರ್ವಕವಾಗಿ ಸರ್ಕಾರ ಪರಿಗಣಿಸುತ್ತಿಲ್ಲವೆಂದು ಅರ್ಥವಾಗುತ್ತಿದೆ. ಈಗಲಾದರೂ ಕೂಡ ಮುಂದೆ ಮಾಡುತ್ತೇವೆಂದು ಹೇಳಿದರೆ ನಮಗೆ ಸಮಾಧಾನವಾಗುತ್ತಿತ್ತು.

ಮಾಡುವುದಿಲ್ಲವೆಂದು ಉತ್ತರದಲ್ಲಿ ಸ್ಪಷ್ಟವಾಗಿ ಕೊಟ್ಟರೆ ಅರ್ಥ ಏನಾಗುತ್ತದೆ? ಏನು ಅವರು ನಮ್ಮ ಉಪಕಾರಕ್ಕೆ ಕೊಡುತ್ತಾರಾ?

ಶ್ರೀ ಎನ್.ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಡಾ: ನಂಜುಂಡಪ್ಪನವರ ವರದಿ, ರಾಜ್ಯದಲ್ಲಿರತಕ್ಕಂಥ ಎಲ್ಲಾ ಹಿಂದುಳಿದಿರತಕ್ಕಂಥ ತಾಲ್ಲೂಕುಗಳಿಗೆ ಎಲ್ಲೆಲ್ಲಿ ಅನ್ಯಾಯವಾಗಿದೆ ಅದನ್ನು ಸರಿಪಡಿಸತಕ್ಕಂಥ ಮಾತನ್ನು ಪದೆ ಪದೆ ಹೇಳುತ್ತಿದ್ದಾರೆ. ಇವತ್ತು ನಾನು ಮಾನ್ಯ ಸಚಿವರನ್ನು ಕೇಳತಕ್ಕಂಥದ್ದು ಇಷ್ಟೆ. ಔರಾದ್ ಈ ರಾಜ್ಯದ ಕೊನೆಯ ತಾಲ್ಲೂಕು, ಅದರ ಪ್ರಪೋಸಲ್ ಬಂದು ಮಾಡತಕ್ಕಂಥದ್ದನ್ನು ಬಿಟ್ಟು ಸಮ್ಮಶ್ರ ಸರ್ಕಾರದಲ್ಲಿ ಯಾರೋ ಹೇಳಿದರು ಎಂದು ಕಾಂಗ್ರೆಸ್ ಪಕ್ಷದವರಿಗೆ ಅನ್ಯಾಯ ಮಾಡತಕ್ಕಂಥದ್ದು ಅಲ್ಲ. ಇವತ್ತು ಸದನದಲ್ಲಿ ಪ್ರಶ್ನೆಯನ್ನು ಕೇಳಿದಾಗ ಅಲ್ಲಿ ಅನ್ಯಾಯವಾಗಿದೆ, ಅವರು ಹಿರಿಯ ಸದಸ್ಯರಿದ್ದಾರೆ, ಅವರ ತಾಲ್ಲೂಕಿಗೆ ITI ಕಾಲೇಜನ್ನು ಕೊಡುವುದರಲ್ಲಿ ಸರ್ಕಾರ ವಿಫಲವಾಗಿದೆ. ಅದಕ್ಕೆ ಇವತ್ತು ಕೇಳತಕ್ಕಂಥ ಪ್ರಶ್ನೆಗೆ ನಿರ್ದಿಷ್ಟವಾದಂಥ ಉತ್ತರ ಸರ್ಕಾರದ ಕಡೆಯಿಂದ ಬರಲೇಬೇಕು. ಯಾರದೋ ಮಾತನ್ನು ನೀವು ಕೇಳಿ ಸದನದಲ್ಲಿ ಉತ್ತರವನ್ನು ಕೊಟ್ಟರೆ ಸರಿಹೋಗುವುದಿಲ್ಲ. ನೀವು ಡಾ: ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ ಆ ಭಾವನೆ ತಮ್ಮ ಮನಸ್ಸಿನಲ್ಲಿ ಇಲ್ಲ. ಇವತ್ತು ಹಿಂದುಳಿದ ಪ್ರದೇಶಕ್ಕೆ ಸಹಾಯ ಮಾಡತಕ್ಕಂಥ ಮನಸ್ಸು ಕೂಡ ಇಲ್ಲ. ಖಡಾಖಂಡಿತವಾಗಿ ಹೇಳಬೇಕು, ಮುಂದಿನ ಬಜೆಟ್‌ನಲ್ಲಿ ಸೇರಿಸುತ್ತೇವೆ ಎನ್ನತಕ್ಕಂಥದ್ದು ಅಲ್ಲ, ಇವತ್ತು ನನ್ನ ತಾಲ್ಲೂಕಿನಲ್ಲಿ, ನಾನು ಒಬ್ಬ ರಾಜ್ಯದ ಮುಖ್ಯಮಂತ್ರಿಯಾಗಿ ITI ಕಾಲೇಜು ಕೊಟ್ಟು ಅಲ್ಲಿ ಗ್ರಾಂಟ್ ಕೊಡುವುದರಲ್ಲಿ ತಾರತಮ್ಯ ಅದರ ಬಗ್ಗೆ ನಾನು ಎಂದೂ ನಿಮ್ಮನ್ನು ಕೇಳುವುದಕ್ಕೆ ಹೋಗುವುದಿಲ್ಲ. ನಾನು ಎರಡು ಸಲ ನಿಮಗೆ ಫೋನ್ ಮಾಡಿದ್ದೆ, ಇವತ್ತು ನೀವು ಯಾರದೋ ಮಾತು ಕೇಳಿ ಸರ್ಕಾರ ನಡೆಸಬೇಕು, ಇದು ನಡೆಯುತ್ತದೆ ಎನ್ನತಕ್ಕಂಥದ್ದು ಸರಿಯಾದ ರೀತಿಯಲ್ಲಿ ಅಲ್ಲವೇ ಅಲ್ಲ. ಇವತ್ತು ಅವರು ಏನು ಕೇಳುತ್ತಾರೆ, ಔರಾದ್ ಹಿಂದುಳಿದ ತಾಲ್ಲೂಕು ಅದಕ್ಕೆ ITI ಕಾಲೇಜು ಕೊಡತಕ್ಕಂಥದ್ದರ ಬಗ್ಗೆ ನಿರ್ದಿಷ್ಟವಾದ ಉತ್ತರ ಇವತ್ತು ಸದನದಲ್ಲಿ ಕೊಡಬೇಕು.

ಶ್ರೀ ಇಕ್ಬಾಲ್ ಅನ್ಸಾರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಹಿರಿಯರು ಹಾಗೂ ಮಾಜಿ ಮುಖ್ಯಮಂತ್ರಿಗಳು, ಅವರಿಗೆಲ್ಲಾ ಗೊತ್ತಿದೆ. ಅವರು ಮುಖ್ಯಮಂತ್ರಿಯಾದಾಗ ಸಹಿತ ಔರಾದ್ ತಾಲ್ಲೂಕಿನ ಬಗ್ಗೆ

ಬೇಡಿಕೆ ಇತ್ತು. ನಾವು ಬಂದ ನಂತರ 5 ಹೊಸ ಕಾಲೇಜುಗಳು ತೆಗೆಯಬೇಕೆಂದು ಬಂತು, ಅವಶ್ಯಕತೆಯ ಆಧಾರ ನೋಡಿಕೊಂಡು ಡಾ: ನಂಜುಂಡಪ್ಪನವರ ವರದಿಯ ಪ್ರಕಾರ ಮಾಡಬೇಕಾಗಿದೆ ಅದರ ಪ್ರಕಾರ ನಾವು ಮಾಡುತ್ತಿದ್ದೇವೆ. ಅದು ಅಲ್ಲದೆ ಕೆಲವೊಂದು ಕಡೆ ಬಡ ವಿದ್ಯಾರ್ಥಿಗಳು ಎಲ್ಲೆಲ್ಲಿ ಇದ್ದಾರೆ ಅದನ್ನು ನೋಡಿಕೊಂಡು 5 ಕಾಲೇಜುಗಳನ್ನು ಈ ವರ್ಷ ಒದಗಿಸಿಕೊಟ್ಟಿದ್ದೇವೆ. 2007–08ನೇ ಬಜೆಟ್‌ನಲ್ಲಿ ಔರಾದ್‌ಗೆ ಮಾಡಿಕೊಡುತ್ತೇನೆಂದು ಈಗತಾನೆ ನಾನು ಹೇಳಿದೆ. ಮೇಲಾಗಿ ಈಗ 6 ಕಾಲೇಜುಗಳು ಅಲ್ಲಿ ಕಾರ್ಯನಿರ್ವಹಿಸುತ್ತಿವೆ. ಅಲ್ಲಿ ಕಾಲೇಜುಗಳೇ ಇಲ್ಲ, ವಿದ್ಯಾರ್ಥಿಗಳು ಎಲ್ಲಿಗೆ ಹೋಗಬೇಕು ಎನ್ನುವ ಸಮಸ್ಯೆ ಇದ್ದರೆ, ಅದರ ಬಗ್ಗೆ ನಾವು ಪರಿಗಣಿಸಬೇಕಾಗುತ್ತದೆ. ಸರ್ಕಾರದ ಅನುದಾನದಿಂದ ಒಂದು ಕೈಗಾರಿಕಾ ತರಬೇತಿ ಕೇಂದ್ರ ನಡೆಯುತ್ತಿದೆ. ಆ ಸಂಸ್ಥೆ ರೂರಲ್ ಐ.ಟಿ.ಐ. ಔರಾದ್, ಬೀದರ್ ಜಿಲ್ಲೆ ಎಂದು ಇದೆ. ಅದು ಅಲ್ಲದೆ 5 ಖಾಸಗೀ ತರಬೇತಿ ಕೇಂದ್ರಗಳು ಅಲ್ಲಿ ಕೆಲಸವನ್ನು ನಿರ್ವಹಿಸುತ್ತಿವೆ. ಸರ್ಕಾರದ್ದೆ ಇನ್ನು ಒಂದು ಹೊಸ ಕಾಲೇಜು ಬೇಕೆಂದರೆ, ನಾವು ಬಜೆಟ್‌ನಲ್ಲಿ ಆಯವ್ಯಯವನ್ನು ಹೆಚ್ಚಿಸಿಕೊಂಡು ನಾನು ಒದಗಿಸಿ ಕೊಡುತ್ತೇನೆಂದು ಹೇಳಿರುತ್ತೇನೆ. ಮಾನ್ಯ ಧರ್ಮಸಿಂಗ್ ಸಾಹೇಬರು ಹೇಳಿದರು, ಕಾಂಗ್ರೆಸ್ ಪಕ್ಷದ ತಾಲ್ಲೂಕು ಇದೆ ಎಂದು, ದಯಮಾಡಿ ಅದರ ಬಗ್ಗೆ ತಪ್ಪು ತಿಳಿದುಕೊಳ್ಳುವುದಕ್ಕೆ ಹೋಗಬೇಡಿ. ಏಕೆಂದರೆ ಸರ್ಕಾರದಲ್ಲಿ ನಾವು ಕುಳಿತುಕೊಂಡು ಯಾರು ಹೇಳಿದರು ಕೇಳಿದರು ಎಂದು ನಾವು ನೋಡುವುದಿಲ್ಲ, ವರದಿಗಳ ಆಧಾರದ ಮೇಲೆ ಅಲ್ಲಿಯ ಜನಗಳ ಆಧಾರದ ಮೇಲೆ ಬಡ ವಿದ್ಯಾರ್ಥಿಗಳು ಎಲ್ಲೆಲ್ಲಿ ಇದ್ದಾರೆ ಅವಶ್ಯಕತೆ ಎಲ್ಲಿ ಇದೆ, ಬಜೆಟ್ ನೋಡಿಕೊಂಡು ಆಲೋಕೇಶನ್ ಮಾಡಲಾಗಿದೆ. ತಪ್ಪು ಭಾವಿಸುವುದಕ್ಕೆ ಹೋಗಬಾರದೆಂದು ನಾನು ಮನವಿಯನ್ನು ಮಾಡುತ್ತೇನೆ.

ಅಧ್ಯಕ್ಷರು: ದಯಮಾಡಿ ಜಾಸ್ತಿಯಾಗಿ ಹೋಯಿತು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಜಾಸ್ತಿ ಏನು ಆಗಿಲ್ಲ.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಮುಂದಿನ ವರ್ಷವೆಂದು ಹೇಳಿದ್ದಾರೆ. ಸ್ಪಷ್ಟವಾಗಿ ಉತ್ತರವನ್ನು ಹೇಳಿದರು ಆದ್ದರಿಂದ ನಾನು ಕ್ಲೋಸ್ ಮಾಡಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ತಮಗೆ ಇದನ್ನು ಕಳುಹಿಸುತ್ತೇನೆ, ತಾವು ನೋಡಿ. 5 ಕಾಲೇಜುಗಳು ಇವೆ ಎಂದು ಹೇಳಿದ್ದಾರೆ.

ಅಧ್ಯಕ್ಷರು: ಅವರು ಸ್ಪಷ್ಟವಾಗಿ 2007–08ರಲ್ಲಿ ಕನ್ಸೀಡರ್ ಮಾಡುತ್ತೇವೆಂದು ಹೇಳಿದ್ದಾರೆ. ಅಷ್ಟು ಹೇಳಿದರೂ ಸಹಿತ, ನೀವು ಹಿರಿಯ ಸದಸ್ಯರು ಹೀಗೆ ಮಾತನಾಡಿದರೆ ಹೇಗೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನೀವು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು: ನೀವು ಈ ತರಹ ಮಾಡುವುದು ಸರಿಯಾದುದು ಅಲ್ಲ. ಆಗಲೇ ಒಂದು ಗಂಟೆ ಮುಗಿದು ಹೋಯಿತು. ಇನ್ನು 3 ಪ್ರಶ್ನೆಗಳು ಇವೆ. ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ತಾವೇ ಹೇಳಬೇಕು ಇದರ ಬಗ್ಗೆ.

ಅಧ್ಯಕ್ಷರು: ಮುಂದಿನ ಪ್ರಶ್ನೆ.

ಪಶುವೈದ್ಯಾಧಿಕಾರಿಗಳ ನೇಮಕಾತಿ

42 (198) ಶ್ರೀ ಹೊನ್ನಾಳಿ ಜಬ್ಬಾರ್‌ಖಾನ್ ಹಯಾತ್‌ಖಾನ್ (ಹುಬ್ಬಳ್ಳಿ): ಮಾನ್ಯ ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಪಶುವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮತ್ತು ವರ್ಗವಾರು ವಿವರ ನೀಡುವುದು) ;

ಆ) ರಾಜ್ಯದ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳು ಎಷ್ಟು;

ಇ) ಖಾಲಿ ಇರುವ ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಯಾವ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು ;

ಈ) ಹಾಗಿದ್ದಲ್ಲಿ, ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೇ ಪ್ರಾರಂಭವಾಗಿದೆಯೇ ; ಹಾಗಿಲ್ಲವಾದಲ್ಲಿ, ಅದಕ್ಕೆ ಕಾರಣವೇನು ?

ಶ್ರೀ ರೇವೂ ನಾಯಕ್ (ಬೆಳಮಗಿ) (ಪಶುಸಂಗೋಪನೆ ಸಚಿವರು)

ಅ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಒಟ್ಟಾರೆ 1985 ಇದ್ದು, ಅದರಲ್ಲಿ 1161 ಪಶು ವೈದ್ಯಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಜಿಲ್ಲಾವರು ಅನುಬಂಧದಲ್ಲಿ ನೀಡಿದೆ. ಎಲ್ಲವೂ 'ಬಿ' ವರ್ಗದ ಹುದ್ದೆಗಳಾಗಿರುತ್ತವೆ.

ಆ) ರಾಜ್ಯದಲ್ಲಿ ಒಟ್ಟು 824 ಪಶುವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇರುತ್ತವೆ.